

(6ನೇ ಪುಟದಿಂದ)

ನಂಬಿಕೆಗಳು ಏನೇ ಇರಲಿ ವಿಘ್ನ ನಿವಾರಕ ಶಕ್ತಿ ಹೊಂದಿರುವ ಗಣೇಶನಿಗೆ ವಿಘ್ನೇಶ್ವರ ಎಂದೂ ಕರೆಯುತ್ತಿದ್ದು, ಯಾವುದೇ ಶುಭ ಕಾರ್ಯಕ್ಕೆ ಕೈ ಹಾಕುವ ಮುನ್ನ ಆತನನ್ನು ಸ್ಮರಿಸಿ ಗೌರವಿಸುವುದು ರೂಢಿ.

ಪುರಾಣ ಪ್ರಸಿದ್ಧ ಗಣೇಶನ ಸೌಂದರ್ಯವನ್ನು ಅಗ್ನಿ ಪುರಾಣದ 'ಪ್ರತಿಮಾ ಲಕ್ಷಣ' ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ. ನಾನಾ ಬಗೆಯಲ್ಲಿ ಗಣೇಶನ ಮೂರ್ತಿಯನ್ನು ಚಿತ್ರಿಸುವ ಕಲಾ ಶಿಲ್ಪಿಗಳಿಗೆ ಇದೇ ಸ್ಫೂರ್ತಿ ಕೂಡ. ಕಲಾವಿದರಿಗೂ ಗಣೇಶನ ಮೂರ್ತಿ ಸ್ಥಾಪಿಸುವುದು ಎಂದರೆ ಎಲ್ಲಿಲ್ಲದ ಸಂತೋಷ. ಅವರು ನಿರ್ಮಿಸುವ ಪೌರಾಣಿಕ ಪ್ರತಿಮೆಗಳಲ್ಲಿ ಗಣೇಶನದ್ದೇ ಹೆಚ್ಚು. ಅದನ್ನು ಬಿಟ್ಟರೆ, ಶಿವ ಮತ್ತು ನಟರಾಜನ ಆಕೃತಿಯ ಕುಸುರಿ ಮಾಡುತ್ತಾರೆ. ಚತುರ್ಭುಜ ಗಣೇಶ ಕಲಾವಿದರ ಸೃಜನಶೀಲ ಕೈಚಳಕಕ್ಕೆ ಎರಡು– ಆರು– ಎಂಟು ಭುಜಗಳ ರೂಪತಾಳಿ ಮೋಹಕ ಕೃತಿಗಳಾಗಿ ಆಕರ್ಷಿಸುತ್ತವೆ. ಅದರಲ್ಲಿ ಎರಡು ಭುಜ ಆಕೃತಿಯನ್ನು 'ಅಭಯ ಮುದ್ರಾ' ಶಿಲ್ಪ ಎಂದು ಹೇಳಲಾಗುತ್ತದೆ.

ಮಹಾರಾಜನಂತೆ ಕೂತು ವಿಶ್ರಮಿಸುವ ಭಂಗಿ, ನಿಂತು ಪರಿಶೀಲಿಸುವ ವಿಚಕ್ಷಣ ದಳಪತಿಯಂತೆ, ನಾಟ್ಯ ಸರಸ್ವತಿಯನ್ನು ಮಣಿಸಲು ನೃತ್ಯಗಾರನಂತೆ ಪಣ ತೊಟ್ಟು ನಿಂತ ವೀರನ ಪ್ರತಿಮೆಗಳು ಹೆಚ್ಚು ಜನಪ್ರಿಯ. ನಟನೆಯಲ್ಲಿಯೂ ಗಣೇಶನ ನಾನಾ ಭಂಗಿ– ಭಾವಗಳನ್ನು ಪ್ರಕಟಿಸುವ ಕೌಶಲ್ಯ ಕಲಾವಿದನ ಚಳಕದಿಂದ ಚಿಗುರೊಡೆಯುತ್ತದೆ.



ಇಲಿಯ ಮೇಲೆ ನಾಟ್ಯವಾಡುವ ಗಣೇಶ, ಕೆಲವೊಮ್ಮೆ ಗೂಳಿಯನೇರಿ ನಟಿಸುತ್ತಾನೆ. ಅದರಲ್ಲಿಯೂ ಏಕತಾನತೆ ಕಾಡಿದರೆ, ಸಚಿನ್‌ನಂತೆ ಸಿಕ್ಸ್ ಬಾರಿಸುವ ದಾಂಡಿಗನಂತೆ ಕ್ರೀಡಾಂಗಣದಲ್ಲಿ ಕಂಗೊಳಿಸುವಂತೆ ಕಾಣಿಸುವ ಕಲಾವಿದನ ಸೃಷ್ಟಿ, ಬ್ರಹ್ಮ ಸೃಷ್ಟಿಯನ್ನೂ ಮೀರಿಸುವಂತದ್ದು.

ಜ್ಞಾನದ ಅಧಿದೇವತೆ ಎಂದೂ ಹೇಳಲಾಗುವ ಗಣೇಶ ಬುದ್ಧಿಯಲ್ಲಿ ಅಪ್ರತಿಮ. ಈತ ವೇದವ್ಯಾಸರಿಗೆ ಮಹಾಭಾರತದ ಕಥೆಯನ್ನು ವಾಚಿಸಿ ಬರೆಸುವ ಕಲ್ಪನೆಯ ಅಪರೂಪದ ಮೂರ್ತಿ ಕೂಡಾ ಅವತರಿಸಿವೆ. ಆದರೆ ಈ ಭಂಗಿಯ ಗಣೇಶ ಇಂದು ಎಲ್ಲೆಡೆ ಕಾಣಸಿಗುವುದಿಲ್ಲ. ಪುರಾಣ ಪರಿಕಲ್ಪನೆ ಏನೇ ಇರಲಿ ದೇಶವ್ಯಾಪಿ ಅಗಣಿತ ಗಣನಾಥನ ಮೂರ್ತಿಗಳು ವಿವಿಧ ದೇವಾಲಯಗಳಲ್ಲಿ ಪ್ರತಿಷ್ಠಾಪನೆಗೊಂಡಿವೆ. ದಿನ ನಿತ್ಯ ವಿವಿಧ ಕಾರಣಕ್ಕೆ ಅರ್ಚನೆ, ಆರಾಧನೆ, ಅಭಿಷೇಕ, ಹೋಮ ಹವನಗಳಿಗೆ ಸಾಕ್ಷಿ ರೂಪವಾಗಿ ಈ ಗಣನಾಥ ನಿಲ್ಲುತ್ತಾನೆ. ದುಷ್ಟ ನಿವಾರಣೆಯ ಪ್ರತಿರೂಪದಂತಿರುವ ಗಣೇಶ ಮನುಷ್ಯನ ದೈನಂದಿನ ಬದುಕಿನಲ್ಲಿ ಒಂದಿಲ್ಲ ಒಂದು ಕಾರಣಕ್ಕೆ ಭಕ್ತಿಭಾವದಿಂದ ಪೂಜಿಸಿಕೊಳ್ಳುತ್ತಾನೆ. ಮೋದಕ ಪ್ರಿಯ ಗಣೇಶನನ್ನು ಒಲಿಸಿಕೊಳ್ಳಲು, ಮಡಿಯಿಂದ ಬಗೆ ಬಗೆಯ ತಿಂಡಿ– ತಿನಿಸುಗಳನ್ನು ತಯಾರಿಸಿ ನೈವೇದ್ಯ ಅರ್ಪಿಸಿ ಆತನನ್ನು ಸಂತೃಪ್ತಿಗೊಳಿಸುವುದೂ ಪ್ರತೀತಿ. ಆತನಿಗೆ ಕಾಯಿ ಕಡುಬು ಎಂದರೆ ಪಂಚಪ್ರಾಣ. ಅವನ ಇಷ್ಟಗಳನ್ನು ಅರ್ಪಿಸಿ ಯಶಸ್ಸನ್ನು ಸಿದ್ಧಿಸುವಂತೆ ಪ್ರಾರ್ಥಿಸುತ್ತಾರೆ. ಗಣೇಶ ಚತುರ್ಥಿ ತುಂಬಾ ಸಂಭ್ರಮದಿಂದ ನೆರವೇರುವ ರಾಷ್ಟ್ರೀಯ ಹಬ್ಬ.

ಗಣೇಶನ ಉತ್ಸವಕ್ಕೆ ದೀರ್ಘ ಇತಿಹಾಸವೇ ಇದ್ದು ಕ್ರಿ.ಶ. ನಾಲ್ಕನೇ ಶತಮಾನದಲ್ಲಿಯೇ ಆತನ ಹೆಸರಿನಲ್ಲಿ ದೇವಾಲಯ ಇತ್ತು ಎಂಬುದಕ್ಕೆ ಸಾಕ್ಷಿಗಳು ದೊರೆತಿವೆ. 19ನೇ ಶತಮಾನದ ಸಂದರ್ಭದಲ್ಲಿ ಸಾರ್ವತ್ರಿಕ ಗಣೇಶಾರಾಧನೆ ಸ್ವಾತಂತ್ರ್ಯ ಚಳವಳಿಯ ಭಾಗವಾಗಿತ್ತು ಎಂಬುದು ದಾಖಲಾರ್ಹ ಸಂಗತಿ. ವಿದ್ಯೆ, ಸಂಪತ್ತು ಅರ್ಜಿಸಿ ಪೂಜೆಗೆ ಅರ್ಹನಾಗುವ ಗಣೇಶ, ದುಷ್ಟತನದ ಕಣ್ಣು ಎರವಾಗದಿರಲಿ ಎಂಬ ಕಾರಣಕ್ಕೆ ಹೆಚ್ಚು ಹತ್ತಿರವಾಗುತ್ತಾನೆ.